

ಚಂದ್ರಶಿಲಾ ಶಿಖರದಿಂದ ಕಾಣುವ ಶಿಖರಗಳು: ಕೇದಾರನಾಥ್, ಸುಮೇರು, ಭಾಗೀರಥಿ ಹಾಗೂ ದೊಡ್ಡದಾಗಿ ಕಾಣುವ ಚೌಕಂಭ. ಹಾಥಿ ಪರ್ವತ ಹಾಗೂ ನಂದಾದೇವಿ (ಎಡದಿಂದ ಬಲಕ್ಕೆ)

ಚಳಿ, ಕಗ್ಗತ್ತಲು! ಹಣೆಗೆ ಧರಿಸುವ ದೀಪಗಳನ್ನು ಧರಿಸಿ ಹೊರಟೆವು. ಕವಿದಿದ್ದ ಮಂಜು ಹಾಗೂ ಕಗ್ಗತ್ತಲೆಯಲ್ಲಿ ಕೆಲವೇ ಅಡಿಗಳಷ್ಟು ನೋಡಬಹುದಿತ್ತು. ದಾರಿಯುದ್ದಕ್ಕೂ ಐದಾರು ಅಡಿ ವಿಶಾಲ ಕಲ್ಲು ಹಾಸು ಇದ್ದು, ನಡೆಯಲು ಸುಲಭವಾಗಿದ್ದರೂ, ಕೆಲ ಹೊತ್ತಿನಲ್ಲೇ ಸುಸ್ತಾಗಲು ಶುರುವಾಯಿತು. ಏದುಸಿರು ಬಿಡಲು ಶುರುಮಾಡಿದೆವು.

ಹಿಮಾಲಯದ ಎತ್ತರದ ಪ್ರದೇಶಗಳಲ್ಲಿ ಶ್ವಾಸಕೋಶಗಳಿಗೆ ಹೆಚ್ಚಿನ ಆಮ್ಲಜನಕದ ಅವಶ್ಯಕತೆಯಿರುತ್ತದೆ. ಪ್ರತಿ ಹತ್ತು ಹೆಜ್ಜೆಗೂ ಹತ್ತು ಸೆಕೆಂಡ್ ನಿಲ್ಲುವಂತಾಯಿತು. ಸುಮಾರು ಎರಡು ತಾಸು ನಡೆಯುವಷ್ಟರಲ್ಲಿ, ಆ ಚಳಿಯಲ್ಲಿಯೂ ನಾವು ತಂದಿದ್ದ ಕುಡಿಯುವ ನೀರೆಲ್ಲ ಖಾಲಿಯಾಯಿತು! ಕತ್ತಲೆಯ ಪರದೆ ಸರಿಯುತ್ತಾ ನಸು ಹಳದಿ–ಬಿಳಿ ಪರದೆ ಕಾಣತೊಡಗಿತು. ಆಕಾಶದಲ್ಲಿ ಎಲ್ಲಿ ನೋಡಿದರೂ ದಟ್ಟಮೋಡ. ಸೂರ್ಯೋದಯ ನೋಡುವ ಸಾಧ್ಯತೆ ಕಡಿಮೆ ಎನಿಸಿತು. ಆಗೊಮ್ಮೆ ಈಗೊಮ್ಮೆ ಹಿಮಶಿಖರಗಳ ಬಿಂದುಗಳು ಕಾಣತೊಡಗಿದವು. ಅಲ್ಲಲ್ಲಿ ನೀರು ನಿಂತಿದ್ದ ಸಣ್ಣ ಹಳ್ಳಗಳಲ್ಲಿ, ಹೆಪ್ಪುಗಟ್ಟಿದ್ದ ಮಂಜಿನ ತೆಳು ಹಾಳೆಗಳನ್ನು ನೋಡಿದೆವು. ನಾವು ಹಿಡಿದಿದ್ದ ಕೋಲಿನಿಂದ ಮಂಜಿನ ಹಾಳೆಗಳನ್ನು ಕುಟ್ಟಿದಾಗ ಅವು ಛಳ್ ಎಂಬ ಶಬ್ದದೊಂದಿಗೆ ಚೂರಾಗುವುದನ್ನು ನೋಡಿ, ಮತ್ತೆ ಮತ್ತೆ ಕುಟ್ಟಿ ಸಂತೋಷಪಟ್ಟೆವು.

5 ಕಿಲೋಮೀಟರ್ ಚಾರಣದ ನಂತರ, ಬೆಳಿಗ್ಗೆ ಸುಮಾರು 7 ಗಂಟೆಗೆ ತುಂಗಾನಾಥ್ ದೇವಾಲಯ ತಲುಪಿದೆವು. ದೇವಾಲಯದ ಪಕ್ಕದಲ್ಲಿಯೇ ಸಣ್ಣಸಣ್ಣ ಮನೆಗಳಲ್ಲಿ ವಾಸ ಮಾಡುವ ಅರ್ಚಕರು, ಪೂಜಾಸಾಮಗ್ರಿ ವ್ಯಾಪಾರಿಗಳು ಇದ್ದರು. ಅಲ್ಲಿಂದ ಕಾಲುದಾರಿಯಲ್ಲಿ ಸುಮಾರು ಒಂದು ಕಿ.ಮೀ. ಮೇಲೇರಿದರೆ ಚಂದ್ರಶಿಲಾ ಶಿಖರ. ದಾರಿಯುದ್ದಕ್ಕೂ ಯಾವುದೇ ಗಿಡ–ಮರಗಳಿಲ್ಲ.



ಮೋಡಗಳಿಗಿಂತ ಹೆಚ್ಚಿನ ಎತ್ತರದಲ್ಲಿನ ನೋಟ! ನಿಜಕ್ಕೂ ಅದ್ಭುತ!

ಬರೀ ಹುಲ್ಲುಹಾಸಿನ ದಿಬ್ಬಗಳು. ಹತ್ತುವುದು ಸುಲಭದ ಮಾತಾಗಿರಲಿಲ್ಲ. ಏದುಸಿರಿನಲ್ಲಿಯೇ, ಕಷ್ಟಪಟ್ಟು ಚಂದ್ರಶಿಲಾ ಶಿಖರ ತಲುಪಿದಾಗ ಸುಮಾರು 8 ಗಂಟೆ.

ಚಂದ್ರಶಿಲಾ ಶಿಖರ ತಲುಪುತ್ತಿದ್ದಂತೆ ಕೆಲವೇ ನಿಮಿಷಗಳಲ್ಲಿ ದೇಹದ ಆಯಾಸವೆಲ್ಲ ಪರಿಹಾರವಾಗಿ, ಮನಸ್ಸಿನಲ್ಲಿ ಒಂದು ರೀತಿಯ ಮೌನ, ಆನಂದ ಆವರಿಸಿದವು. ಒಳಮನಸ್ಸಿನಲ್ಲಿ ದಿವ್ಯ ಶಾಂತಿ. ನನಗೊಬ್ಬನಿಗೇ ಅಲ್ಲ, ತಂಡದ ಎಲ್ಲರೂ ಮಾತುಕತೆಯಿಲ್ಲದೆ ನಿಂತಿದ್ದರು. ಎಷ್ಟೋ ನಿಮಿಷಗಳ ನಂತರ ನಮಗೆ ಮಾತನಾಡಲು ಎಚ್ಚರವೆನಿಸಿದ್ದು!

ಸೂರ್ಯನ ಬೆಳಕಿನಲ್ಲಿ ಹಿಮಾಲಯದ ಶಿಖರಗಳು ಸುಂದರವಾಗಿ ಕಾಣಿಸಿದವು. ದಟ್ಟ ಮೋಡಗಳು ಇಲ್ಲವಾಗಿ ಚೌಕಂಭ, ತ್ರಿಶೂಲ ಪರ್ವತ, ಭಾಗೀರಥಿ, ನಂದಾದೇವಿ, ಕೇದಾರ ಶಿಖರ ಹಾಗೂ ಬಂದರ್‌ಪೂಂಛ್ ಶಿಖರಗಳನ್ನು ಗುರುತಿಸಲು ಸಾಧ್ಯವಾಯಿತು. ಸ್ವಲ್ಪವೂ ಮೋಡವಿಲ್ಲದ ಸಮಯದಲ್ಲಿ ಮಂದಿನಿ, ಸುಮೇರು, ಸತೋಪಂತ್, ಧೋನಾಗಿರಿ, ಕಾಲಂಕ, ಗೌರಿಪರ್ವತ, ಹಾಥಿಪರ್ವತ, ಗಂಗೋತ್ರಿ ಶಿಖರಗಳನ್ನೂ ಕಾಣಬಹುದೆಂದು ನಮ್ಮ ತಂಡದ ನಾಯಕ ಹೇಳಿದ. ಶ್ರೀರಾಮನು, ರಾವಣನ ಹತ್ಯೆಯ ಪಾಪಶಮನಕ್ಕಾಗಿ ಚಂದ್ರಶಿಲಾ ಶಿಖರದಲ್ಲಿ ತಪಸ್ಸನ್ನು ಕೈಗೊಂಡನೆಂಬ ಐಹಿತ್ಯ ಇದೆ. ಶಿಖರದ ಮೇಲೆ, ಒಂದು ಪುಟ್ಟ ಗುಡಿಯೂ ಇದೆ.

ಚಂದ್ರಶಿಲಾ ಶಿಖರದಿಂದ ಇಳಿದು, ತುಂಗಾನಾಥನ ದೇವಾಲಯಕ್ಕೆ ಬಂದೆವು. ತುಂಗಾನಾಥನ ದರ್ಶನದಿಂದ ಪುಳಕಿತರಾದೆವು. ಒಮ್ಮೆಗೆ 3–4 ಜನ ಕೂಡಬಹುದಾದ ಪುಟ್ಟ ಗರ್ಭಗುಡಿಯಲ್ಲಿ ಲಿಂಗದ ಪಕ್ಕದಲ್ಲಿಯೇ ಸುತ್ತುವರೆದು, ಕೂತು, ಲಿಂಗವನ್ನು ಮುಟ್ಟಿ ಪೂಜೆ ಮಾಡಲು ಅವಕಾಶವಿದೆ. 12 ಸಾವಿರ ಅಡಿಗಳಿಗೂ ಮೇಲಿರುವ ಈ ದೇವಾಲಯದಲ್ಲಿ ಪರಮಾತ್ಮನ ಪೂಜೆ ಕೈಗೊಂಡಿದ್ದು ಅವಿಸ್ಮರಣೀಯ.

ಹಿಮಾಲಯದ ಸಂಚಾರಗಳಲ್ಲಿ ನಾವು ತಲುಪುವ ಜಾಗ (**Destination**) ಹಾಗೂ ಯಾತ್ರೆ (**Journey**) ಎರಡಕ್ಕೂ ಅದರದೇ ಆದ ವಿಶೇಷತೆಯಿದೆ. ಈ ಅನುಭವಗಳನ್ನು ಕಂಡುಂಡ ನಮಗೆ, ಹಿಮಾಲಯದ ಚರಣಗಳಿಗೆ ಶರಣಾಗುವ ಭಕ್ತಿಭಾವವೂ ಗೊತ್ತಿಲ್ಲದೇ ಆವರಿಸುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**